ಕರ್ನಾಟಕ ಸರಕಾರ
ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ದಕ್ಷಿಣ ವಲಯ ಕಲಬುರಗಿ ಜಿ: ಕಲಬುರಗಿ
Email:beosouthgulbarga@gmail.com phone:08472-255141

ಪತ್ರ ಸಂ:ಅ5(1):ಖಾಸಗಿ/ಪ್ರಾಶಾ/ಮಾನ್ಯತೆ/ನವೀಕರಣ/113/2020-21 ದಿನಾಂಕ:02/08/2021

# ಜ್ಞಾಪನ

ವಿಷಯ: ಸಂತ ಜೇವಿಯರ್ಸ್ ಆಂಗ್ಲ ಮಾಧ್ಯಮ ಶಾಲೆಯ ಸಿರನೂರ ಶಾಲೆಗೆ ಪ್ರಥಮ ಮಾನ್ಯತೆ ಹಾಗೂ ಮಾನ್ಯತೆ ನವೀಕರಣ ನೀಡುವ ಕುರಿತು.

ಉಲ್ಲೇಖ: 01) ಮಾನ್ಯ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ ಪತ್ರ ಸಂಖ್ಯೆ ಜಿ1(1)/ಖಾ.ಪ್ರಾ.ಶಾ:ಹೊ.ಶಾ:ಅನು:140/2018-19/921 ದಿನಾಂಕ:13/06/2019

02)ಈ ಕಛೇರಿಯ ಪತ್ರ ಸಂಖ್ಯೆ:ಅ1/ಖಾಸಗಿ/ಮಾನ್ಯತೆ/ನವೀಕರಣ/174/2019-20 ದಿನಾಂಕ:08/09/2020

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ (ದ.ವ.) ಕಲಬುರ್ಗಿ

03) ಈ ಕಛೇರಿಯ ಪತ್ರ ಸಮ ಸಂಖ್ಯೆ ಪತ್ರ ದಿನಾಂಕ:01/03/2021 &26/07/2021

04) ಪ್ರಾಂಶುಪಾಲರು ಸಂತ ಜೇವಿಯರ್ಸ್ ಪಿ.ಯು.ಸಿ ಕಾಲೇಜ ಸಿರನೂರ ರವರ ಪ್ರಸ್ತಾವನೆ ದಿನಾಂಕ:12/02/2021

05) ಸಂಚಾಲಕರು ಸಂತ ಜೇವಿಯರ್ಸ್ ಆಂಗ್ಲ ಮಾಧ್ಯಮ ಶಾಲೆ ಸಿರನೂರ ರವರ ಪ್ರಸ್ತಾವನೆ ದಿನಾಂಕ:01/07/2021

06) ಪ್ರಾಂಶುಪಾಲರು ಸಂತ ಜೇವಿಯರ್ಸ್ ಆಂಗ್ಲ ಮಾಧ್ಯಮ ಶಾಲೆ ಸಿರನೂರ ರವರ ಪ್ರಸ್ತಾವನೆ ದಿನಾಂಕ: 31/07/2021

******

ಪ್ರಸ್ತುತ ವಿಷಯಕ್ಕೆ ಸಂಬಮಧಿಸಿದಂತೆ ಉಲ್ಲೇಖ 01 ರಂತೆ ಮಾನ್ಯ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ ರವರು ಕರ್ನಾಟಕ ಜೀಸಸ್ ಎಜ್ಯುಕೇಶನ ಸೊಸೈಟಿ ಸಿರನೂರ ತಾ॥ಕಲಬುರಗಿ ರವರ ಅಡಿಯಲ್ಲಿ ಸಂತ ಜೇವಿಯರ್ ಆಂಗ್ಲ ಮಾಧ್ಯಮ ಶಾಲೆ ಫರಹತಾಬಾದ ರಸ್ತೆ ಸಿರನೂರ ತಾ॥ ಕಲಬುರಗಿಯಲ್ಲಿ 2019-20ನೇ ಸಾಲಿಗೆ 1-8ನೇ ತರಗತಿಯ ವರೆಗೆ ಆಂಗ್ಲ ಮಾಧ್ಯಮ ಶಾಲೆ ಪ್ರಾರಂಬಿಸಲು ಅನುಮತಿ ನಿಡಿರುತ್ತಾರೆ. ಅದರಂತೆ ಉಲ್ಲೇಖ (2) ರನ್ವಯ ಈ ಕಛೇರಿಯಿಂದ 1ಹಾಗೂ 2ನೇ ತರಗತಿಗಳಿಗೆ 2019-20ನೇ ಸಾಲಿಗೆ ಪ್ರಥಮ ಮಾನ್ಯತೆಯನ್ನು ನೀಡಲಾಗಿದ್ದು, ಉಲ್ಲೇಖ (4) ರಂತೆ ಪ್ರಾಂಶುಪಾಲರು ಸಂತ ಜೇವಿಯರ್ಸ್ ಪಿ.ಯು.ಸಿ ಕಾಲೇಜ ಸಿರನೂರ ರವರು ಮಾನ್ಯತೆಯನ್ನು ನವೀಕರಿಸಬೇಕೆಂದು ಪ್ರಸ್ತಾವನೆಯನ್ನು ಸಲ್ಲಿಸಿರುವ ಹಿನ್ನಲೆಯಲ್ಲಿ ಉಲ್ಲೇಖ(3) ರಂತೆ 11 ಅಂಶಗಳ ಆಕ್ಷೇಪಣೆಗಳೊಂದಿಗೆ ಪ್ರಸ್ತಾವನೆಯನ್ನು ಹಿಂದಿರುಗಿಸಲಾಗಿದ್ದು , ಪುನಃ ಉಲ್ಲೇಖ (5) ರಂತೆ ಸಂಚಾಲಕರು ಸಂತ ಜೇವಿಯರ್ಸ್ ಆಂಗ್ಲ ಮಾಧ್ಯಮ ಶಾಲೆ ಸಿರನೂರ ರವರು ಕೋವಿಡ್-19ರ ಸಾಂಕ್ರಾಮಿಕ ರೋಗದ ತಿವ್ರತೆ ಹೆಚ್ಚಾಗಿದ ಕಾರಣ ಲಾಕಡೌನ್ ಆಗಿದ್ದರಿಂದ ಸ್ವಲ್ಪ ತಡವಾಗಿ ಈಗ ಹಿಂದಿನ ಎಲ್ಲಾ ದಾಖಲೆಗಳನ್ನು ಸರಿಪಡಿಸಿ ಇನ್ನೊಮ್ಮೆ 2020-2021ರ ಶೈಕ್ಷಣಿಕ ಮಾನ್ಯತೆಯನ್ನು ನವೀಕರಣೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸುತ್ತಿರುವುದಾಗಿ ಶೈಕ್ಷಣಿಕ ಮಾನ್ಯತೆಯನ್ನು ನವೀಕರಿಸಬೇಕೆಂದು ಪ್ರಸ್ತಾವನೆಯನ್ನು ಸಲ್ಲಿಸಿರುವ ಹಿನ್ನಲೆಯಂತೆ ಪುನಃ ಈ ಕಛೇರಿಯಿಂದ ಉಲ್ಲೇಖ (3) ರ ಪತ್ರ ದಿನಾಂಕ:26/07/2021 ರಂತೆ (5) ಅಂಶಗಳ

ಆಕ್ಷೇಪಣೆಗಳನ್ನು ಸರಿಪಡಿಸಿ ಸಲ್ಲಿಸಲು ತಿಳಿಸಿ ಹಿಂದಿರುಗಿಸಲಾಗಿರುತ್ತದೆ. ಮುಂದುವರೆದು ಉಲ್ಲೇಖ (6) ರಂತೆ ಸದರಿ ಶಾಲೆಯ ಪ್ರಾಂಶುಪಾಲರು ಪ್ರಸ್ತಾವನೆಯನ್ನು ನಿಯಮಾನುಸಾರ ಸರಿಪಡಿಸಿ ಸಲ್ಲಿಸಿರುವಂತೆ ಉಲ್ಲೇಖ (7) ರಂತೆ ಈ ಕಛೇರಿಯ ಶಿಕ್ಷಣ ಸಂಯೋಜಕರ ವರದಿಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

**ಆದೇಶ:-**

| ಕ್ರಸಂ | ಶಾಲೆಯ ಹೆಸರು | ತರಗತಿ | ಮಾನ್ಯತೆ ವರ್ಷ |
|---|---|---|---|
| 01 | ಸಂತ ಜೇವಿಯರ್ಸ ಆಂಗ್ಲ ಮಾಧ್ಯಮ ಶಾಲೆ ಎನ್ ಎಚ್ 218 ಫರಹತಾಬಾದ ರಸ್ತೆ ಸಿರನೂರ ತಾ॥ ಕಲಬುರಗಿ(ದ.ವ) | 1 ರಿಂದ 8 ನೇ ತರಗತಿ (ಆಂಗ್ಲ ಮಾಧ್ಯಮ) ಶಾಶ್ವತ ಅನುದಾನ ರಹಿತ | 2020-21ನೇ ಸಾಲಿಗೆ 3ನೇ ತರಗತಿಗೆ, 2021-22ನೇ ಸಾಲಿಗೆ 4ನೇ ತರಗತಿಗೆ ಪ್ರಥಮ ಮಾನ್ಯತೆ ನೀಡಿ, 1 ರಿಂದ 2ನೇ ತರಗತಿಗೆ 2020-21 ರಿಂದ 2021-22 ನೇ ಸಾಲಿನ ವರೆಗೆ ಹಾಗೂ 3ನೇ ತರಗತಿಗೆ 2021-22ನೇ ಸಾಲಿನ ವರೆಗೆ ಮಾನ್ಯತೆ ನವೀಕರಣ ನೀಡಿದೆ |

**ಷರತ್ತುಗಳು:-**

1) ಆಡಳಿತ ಮಂಡಳಿಯ ಸದಸ್ಯರ ಪಟ್ಟಿಯಎಲ್ಲಾಜಿಲ್ಲಾ ನೊಂದಾಣಾಧಿಕಾರಿಗಳಿಂದ ಪ್ರತಿ ವರ್ಷ ನವೀಕರಿಸಿಕೊಳ್ಳತಕ್ಕದ್ದು.
2) ಶಾಲೆಯಲ್ಲಿಎಲ್ಲಾಜಾತಿ ಮಕ್ಕಳಿಗೆ ಸೇರ್ಪಡೆಯಾಗಲು ಮುಕ್ತ ಅವಕಾಶ ನೀಡತಕ್ಕದ್ದು.
3) ಇಲಾಖೆಯ ಪೂರ್ವಾನುಮತಿಇಲ್ಲದೆಯಾವುದೇ ತರಗತಿಗಳನ್ನು ತೆರೆಯತಕ್ಕದಲ್ಲ
4) ಶಾಲೆಯ ಲೆಕ್ಕ ಪತ್ರಗಳನ್ನು ಪ್ರತಿ ವರ್ಷಅನುಮೋದನೆಗೊಂಡಚಾರ್ಟಡ್ಅಕೌಂಟೆಟರವರಿಂದಅಡಿಟ್ ಮಾಡಿಸತಕ್ಕದ್ದು.
5) ಶಿಕ್ಷಣ ಕಾಯ್ದೆಯನ್ವಯ ಪ್ರತಿ ತರಗತಿಗಳಲ್ಲಿ ಮಕ್ಕಳ ಸಂಖ್ಯೆ 50:40:1 ಅನುಪಾತ ಹೊಂದಿರತಕ್ಕದ್ದು.
6) ನಿಗಧಿ ಪಡಿಸಿದ ಸ್ಥಿರ ನಿಧಿ ಜಂಟಿಖಾತೆಯಲ್ಲಿಠೇವಣಿಕರಿಸತಕ್ಕದ್ದು
7) ಕರ್ನಾಟಕ ಶಿಕ್ಷಣ ಮಸೂದೆಯಡಿರಚಿತವಾದಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ ನಿಯಂತ್ರಣ ಮತ್ತು ಪಠ್ಯಕ್ರಮ ನಿಗಧೀಕರಣ ನಿಯಾಮಾವಳಿ 1995 ಮತ್ತುಕರ್ನಾಟಕ ಶಿಕ್ಷಣ ಸಂಸ್ಥೆಯ ಮಾನ್ಯತೆ ನಿಯಮಗಳು 1999 ರ) ಅಡಿಯಲ್ಲಿ ನಿಗದಿಪಡಿಸಿದಂತೆ ಕನಿಷ್ಠ ಮೂಲಭೂತ ಸೌಲಭ್ಯಗಳನ್ನು ಹೊಂದಿರತಕ್ಕದ್ದು.
8) ಆಡಳಿತ ಮಂಡಳಿಯವರು ಇಲಾಖೆಯಎಲ್ಲಾ ನೀತಿನಿಯಮಗಳಿಗೆ ಬದ್ಧರಾಗಿರತಕ್ಕದ್ದು.
9) ಮಕ್ಕಳ ಸುರಕ್ಷತಾ ಕ್ರಮದ ಕುರಿತು ಮಾನ್ಯ ಸರ್ವೋಚ್ಚ ನ್ಯಾಯಾಲಯ ರಿಟ್ ಅರ್ಜಿ ಸಂಖ್ಯೆ.483/2004 ರ ಆದೇಶ ದಿನಾಂಕ:13/04/2009ರಲ್ಲಿ ಅಂಶಗಳನ್ನು ಚಾಚು ತಪ್ಪದೆ ಪಾಲಿಸುವುದು.

**ಕ್ಷೇತ್ರ ಶಿಕ್ಷಣಾಧಿಕಾರಿಗಳು**
**ದಕ್ಷಿಣ ವಲಯ ಕಲಬುರಗಿ**

**ಗೆ,**

ಪಾಂಶುಪಾಲರು
ಸಂತ ಜೇವಿಯರ್ಸ ಆಂಗ್ಲ ಮಾಧ್ಯಮ ಶಾಲೆ
ಎನ್ ಎಚ್ 218 ಫರಹತಾಬಾದ ರಸ್ತೆ ಸಿರನೂರ
ತಾ॥ ಕಲಬುರಗಿ(ದ.ವ)

ಪ್ರತಿ:
01.ಕಛೇರಿಯ ಕಡತಕ್ಕೆ